**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಮಗಳೂರು**

**ಸತ್ರ ಮೊಕದ್ದಮೆ ನಂಃ 56/2021**

| | | |
|---|---|---|
| ಸಾಕ್ಷಿದಾರರ ಹೆಸರು | - ಶರೀಫಾ.ಸಿ.ಎಂ. | ಪಿಡಬ್ಲ್ಯೂ- 02 |
| ಗಂಡನ ಹೆಸರು | - ಸೋಯಿಬ್.ಹೆಚ್.ಎನ್ | ಸಿಡಬ್ಲ್ಯೂ - 05 |
| ವಯಸ್ಸು | - 35 ವರ್ಷ | |
| ಉದ್ಯೋಗ | - ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಸಮಾಜಿಕ ಅರಣ್ಯ ಉಪವಿಭಾಗ ಚಿಕ್ಕಮಗಳೂರು | |
| ವಾಸ ಸ್ಥಳ | - ಚಿಕ್ಕಮಗಳೂರು | |

*(1 ರಿಂದ 3 ನೇ ಆರೋಪಿತರನ್ನು ಈ ದಿನ **Google meet** ನಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಚಿಕ್ಕಮಗಳೂರಿನ ಜಿಲ್ಲಾ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ. ಸಾಕ್ಷಿಯ ವಿಚಾರಣೆಯನ್ನು ದಾಖಲಿಸುವ ಮೊದಲು ಆರೋಪಿತರಿಗೆ ಸಾಕ್ಷಿ ಮಾತನಾಡುವುದು ಸರಿಯಾಗಿ ಕೇಳಿಸುತ್ತಿದೆ ಎಂದು ಖಾತ್ರಿಪಡಿಸಿಕೊಳ್ಳಲಾಯಿತು.)*

ದಿನಾಂಕಃ 14.08.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದಃ-

1. ನಾನು 2020 ರಿಂದ 2024 ರವರೆಗೆ ಕಡೂರು ಉಪವಲಯದಲ್ಲಿ ವಲಯ ಅರಣ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ಈಗ ತೋರಿಸಿರುವ ಕ್ರಮ ಸಂಖ್ಯೆ.1 ಎಂದು ನಮೂದು ಆದ ಶ್ರೀಗಂಧದ ತುಂಡನ್ನು ಕಡೂರು ವಲಯ ಅರಣ್ಯಾಧಿಕಾರಿಯ ಮನವಿ ಮೇರೆಗೆ ಪರೀಕ್ಷೆ ಮಾಡಿದ್ದು ಸದರಿ ಮರದ ತುಂಡಿನ ರಚನೆ ಮತ್ತು ವಾಸನೆಯಿಂದ ಶ್ರೀಗಂಧದ ಮರದ ತುಂಡು ಎಂದು ದೃಢೀಕರಿಸಿ ದೃಢೀಕರಣ ಪತ್ರವನ್ನು ನೀಡಿರುತ್ತೇನೆ. ಸದರಿ ದೃಢೀಕರಣ ಪತ್ರವನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ.3 ಎಂದು ಹಾಗೂ ಅದರಲ್ಲಿರುವ ನನ್ನ ಸಹಿಯನ್ನು ನಿಪಿ.3 (ಎ) ಎಂದು ಗುರುತಿಸಲಾಯಿತು.

3. ಸದರಿ ಕ್ರಮ ಸಂಖ್ಯೆ 1 ಎಂದು ಗುರುತಿಸಿರುವ ಶ್ರೀಗಂಧದ ಮರದ ತುಂಡನ್ನು ಈಗ ಮು.ಮಾ.1 ಎಂದು ಗುರುತಿಸಲಾಯಿತು. ಸದರಿ ಮು.ಮಾ.1 ರ ಮೇಲೆ ನನ್ನ ಸಹಿ ಮತ್ತು ಸೀಲ್ ಇದ್ದು ಅದನ್ನು ಮು.ಮಾ.1(ಎ) ಎಂದು ಗುರುತಿಸಲಾಯಿತು. ಈಗ ನ್ಯಾಯಾಲಯದ ಮುಂದಿರುವ ಮರದ ತುಂಡು ಶ್ರೀಗಂಧದ ಮರದ ತುಂಡುಗಳಾಗಿರುತ್ತವೆ.

<u>**ಪಾಟೀ ಸವಾಲುಃ 1 ರಿಂದ 3 ನೇ ಆರೋಪಿತರ ಪರವಾಗಿ ಶ್ರೀಮತಿ ಕೆ.ಎಂ.ಕೆ ವಕೀಲರಿಂದಃ-**</u>

4. ಮು.ಮಾ.1 ಮತ್ತು ನ್ಯಾಯಾಲಯದ ಮುಂದಿರುವ ಇತರ ಮರದ ತುಂಡುಗಳು ಶ್ರೀಗಂಧದ ಮರದ ತುಂಡುಗಳು ಅಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಮರದ ತುಂಡನ್ನು ಪರೀಕ್ಷಿಸಿರುವುದಿಲ್ಲ ಎಂದರೆ ಸರಿಯಲ್ಲ. ಸಹೋದ್ಯೋಗಿಗಳ ಒತ್ತಾಯಕ್ಕೆ ಮಣಿದು ಸುಳ್ಳು ದೃಢೀಕರಣ ಪತ್ರವನ್ನು

ನೀಡಿರುತ್ತೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ **4** ನೇ ಆರೋಪಿತನ ಪರವಾಗಿ ಶ್ರೀ ಐ.ಎಸ್.ಟಿ. ವಕೀಲರಿಂದಃ-

5. ಯಾವ ದಿನಾಂಕದಂದು ನಾನು ಮು.ಮಾ.1 ನ್ನು ಪರೀಕ್ಷೆ ಮಾಡಿದ್ದೆ ಎಂದು ನಿಪಿ.3 ರಲ್ಲಿ ದಿನಾಂಕವನ್ನು ನಮೂದು ಮಾಡಿರುವುದಿಲ್ಲ. ನಿಪಿ.3 ರಲ್ಲಿ ತಿದ್ದಿದ್ದ ಸ್ಥಳದಲ್ಲಿ ನಾನು ಸಹಿ ಮಾಡಿರುವುದಿಲ್ಲ. ಮು.ಮಾ.1 ರ ಮೇಲೆ ವಿಶೇಷ ಗುರುತು ಇರಲಿಲ್ಲ. ಮು.ಮಾ.1 ರ ಮೇಲೆ ಇದ್ದ ಚಿಹ್ನೆಯನ್ನು ನಾನು ನಮೂದು ಮಾಡಿರುವುದಿಲ್ಲ.

6. ಮು.ಮಾ.1 ರ ವಯಸ್ಸನ್ನು ನಾನು ಪರೀಕ್ಷೆ ಮಾಡಿರುವುದಿಲ್ಲ. ಮು.ಮಾ.1 ರ ಸುತ್ತಳತೆ ಮತ್ತು ಜಾತಿಯನ್ನು ಬಿಟ್ಟು ಬೇರೆ ಯಾವುದೇ ರೀತಿಯಲ್ಲಿ ಪರೀಕ್ಷೆ ಮಾಡಿರುವುದಿಲ್ಲ. ಮು.ಮಾ.1 ನ್ನು ಪರೀಕ್ಷಿಸುವ ಕುರಿತು ರಸಾಯನಿಕ ಪರೀಕ್ಷೆ ಮಾಡಿರುವುದಿಲ್ಲ.

7. ಶ್ರೀಗಂಧದಲ್ಲಿ ಹಲವಾರು ಜಾತಿಯ ಶ್ರೀಗಂಧದ ಮರಗಳು ಇರುತ್ತವೆ ಎಂದರೆ ಸರಿಯಲ್ಲ. ವಲಯ ಅರಣ್ಯಾಧಿಕಾರಿಯವರ ಮಾತು ಕೇಳಿ ಸುಳ್ಳು ದೃಢೀಕರಣ ಪತ್ರವನ್ನು ನೀಡಿ ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ತರಬೇತಿಯಾದ ಕುರಿತು ದಾಖಲೆಯನ್ನು ಹಾಜರುಪಡಿಸಿಲ್ಲ.

<u>ಮರು ವಿಚಾರಣೆಃ ಇಲ್ಲ.</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಕಿರಣ್ ಕಿಣಿ)
1 ನೇ ಅಪರ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಚಿಕ್ಕಮಗಳೂರು.

ಸಾಕ್ಷಿಯ ಸಹಿ